ಇದಾಗಿ ಸ್ವಲ್ಪ ಕಾಲದ ನಂತರ, ನೀರಜನ ತಂದೆ ವಿಧಿವಶವಾದರು. ತಂಗಿ ಆ ಸುದ್ದಿ ತಿಳಿಸಿದಾಗ ಅವನಿಗೆ ದುಃಖ ಉಕ್ಕಿ ಬಂತು. ಕೂಡಲೇ, ಅವಳ ಮನೆಗೆ ಹೋಗಿ ತಂದೆಯವರ ಕಳೇಬರದ ಮೇಲೆ ಬಿದ್ದು ಮನಃಪೂರ್ತಿ ಅತ್ತು ಬಿಟ್ಟ. ಅವರ ಅಪರಕ್ರಿಯೆಗಳನ್ನು ಮಾಡಬೇಕಿತ್ತಲ್ಲ, ಅವನ ಸಮಯಪ್ರಜ್ಞೆ ಅವನನ್ನು ಎಚ್ಚರಿಸಿತು. ಈ ದೇಶದಲ್ಲಿ ಜನರು ಸತ್ತ ಕೂಡಲೇ, ಅವರ ಅಂತ್ಯಸಂಸ್ಕಾರವನ್ನು ಮಾಡುವ ಹಾಗಿಲ್ಲ. ಹೀಗಾಗಿ ಕಳೇಬರವನ್ನು ಮೊದಲು ಶವಾಗಾರಕ್ಕೆ (ಚಿತಾಗಾರ) ಸಾಗಿಸಿದ. ಸದ್ಯ, ಮಾರನೇ ದಿನವೇ ಅಂತ್ಯಸಂಸ್ಕಾರಕ್ಕೆ ಅವಕಾಶ ಸಿಕ್ಕಿತು. ನಂತರ ಮರುದಿನ ತಂದೆಯವರ ಅಂತ್ಯಕ್ರಿಯೆ ಮಾಡಿ ಮುಗಿಸಿ ಮನೆಗೆ ಹಿಂದಿರುಗಿದ.

ಅವನು ಮನೆಗೆ ಬರುವ ಹೊತ್ತಿಗೆ, ನೇಹ ರೇಷ್ಮಳ ಹುಟ್ಟುಹಬ್ಬಕ್ಕೆ ಸಿದ್ಧತೆ ನಡೆಸಿದ್ದಳು; ಗ್ರಹಚಾರವಶಾತ್ ಅದೇ ದಿನ ಅವಳ ಹುಟ್ಟಿದ ದಿನವಾಗಿತ್ತು. ಮನೆಗೆ ಬಂದ ಕೂಡಲೇ, ಅವಳು ಅವನಿಗೆ ರೇಷ್ಮಳ ಹುಟ್ಟುಹಬ್ಬವನ್ನು ಅದೇ ದಿನ ಆಚರಿಸಲು ಪೀಡಿಸತೊಡಗಿದಳು. ಈಗಿನ್ನೂ ನಾನು ನಮ್ಮ ತಂದೆಯವರ ಅಂತ್ಯಸಂಸ್ಕಾರವನ್ನು ಮುಗಿಸಿಕೊಂಡು ಬಂದಿದ್ದೇನೆ. ನನಗೆ ಈಗ ಸಂಭ್ರಮಿಸುವ ಯಾವ ಮನಸ್ಥಿತಿಯೂ ಇಲ್ಲ ಎಂದು ನೀರಜ್ ಹೇಳಿದ. ಅದಕ್ಕೆ ಅವಳು, ಇಂದು ನನ್ನ ಮಗಳ ಹುಟ್ಟಿದ ಹಬ್ಬ! ಯಾರು ಸತ್ತರೆ ನನಗೇನಂತೆ? ಇಂದು ನಾನು ಅವಳ ಹುಟ್ಟಿದ ಹಬ್ಬ ಆಚರಿಸುವವಳೇ ಎಂದು ಘೋಷಿಸಿದಳು. ಅವರಿಬ್ಬರ ಜಗಳ ತೀವ್ರವಾಗುತ್ತಾ ಸಾಗಿತು. ಕೊನೆಗೆ ಅದು ತಾರಕಕ್ಕೆ ಮುಟ್ಟಿದಾಗ, ನೀರಜ್ ಬಹು ದುಃಖದಿಂದ ಮನೆಯಿಂದ ಹೊರಗೆ ಹೋದ. ನಂತರ ನೇಹ ತನ್ನ ಹಟವನ್ನು ಸಾಧಿಸಿಯೇಬಿಟ್ಟಳು!

ಅಮ್ಮ ಸದಾ ಕಾಲ ಅಪ್ಪನೊಡನೆ ಜಗಳ ಕಾಯುತ್ತಲೇ ಇರುತ್ತಿದ್ದಳು. ಚಿಕ್ಕವನಾದ ನನಗೆ ಅಂತಹ ಜಗಳಗಳಿಗೆ ಕಾರಣವೇನೆಂದು ತಿಳಿಯುತ್ತಿದ್ದಿಲ್ಲ. (ಈಗ ನನಗೆ ಅರ್ಥವಾಗುತ್ತಿದೆ: ಅಮ್ಮ ಸಂಸಾರದಲ್ಲಿ ತನ್ನ ಸರ್ವಸ್ವಾಮ್ಯವನ್ನು ಬಯಸುತ್ತಿದ್ದಳೇನೋ!) ಆ ರಾತ್ರಿ ನನಗಿನ್ನೂ ನಿಚ್ಚಳವಾಗಿ ನೆನಪಿದೆ: ನಾನು ನನ್ನ ರೂಮಿನಲ್ಲಿ ಓದುತ್ತಿದ್ದೆ. ಆಗ ನಮ್ಮ ಮನೆಯ ಮುಂಬಾಗಿಲು ಬಡಿದ ಶಬ್ದವಾಯಿತು. ಅಮ್ಮ ಅಥವಾ ಅಪ್ಪ ಬಾಗಿಲನ್ನು ತೆರೆಯುತ್ತಾರೆಂದು ಕೊಂಡರೆ, ಹಾಗಾಗಲಿಲ್ಲ. ನಾನೇ ಹೋಗಿ ಬಾಗಿಲು ತೆರೆದರೆ, ಪೊಲೀಸ್ ಮನೆಯ ಮುಂದೆ ನಿಂತಿದ್ದರು! ಅವರು ನನ್ನ ತಾಯಿ ನೇಹಳನ್ನು ನೋಡ ಬೇಕೆಂದರು. ನಾನು ಅವರನ್ನು ಒಳಗೆ ಕುಳ್ಳಿರಿಸಿ ಅಮ್ಮನನ್ನು ಕರೆಯಲು ಒಳ ಹೋದೆ. ಅಮ್ಮ ಬಂದ ಕೂಡಲೇ, ಪೊಲೀಸ್ ಕೇಳಿದ: 'ನೇಹ ಅಂದರೆ ನೀವೇನ? ನೀವೇ ತಾನೆ ನಮಗೆ ಈಗ 911 ನಂಬರಿನಲ್ಲಿ ಕರೆ ಮಾಡಿದ್ದು?' ಅಮ್ಮ ಹೌದೆಂದು ತಲೆಯಾಡಿಸಿದಳು. ಆಗ ಪೊಲೀಸ್ ಅಲ್ಲೇ ನಿಂತಿದ್ದ ನನಗೆ ಅಪ್ಪನನ್ನು ಕರೆಯಲು ಹೇಳಿದ. ನಾನು ಹೋಗಿ ಅಪ್ಪನನ್ನು ಕರೆದುಕೊಂಡು ಬಂದೆ. ಆಗ ಪೊಲೀಸ್ ನನ್ನ ಅಪ್ಪನಿಗೆ ಕೇಳಿದ: 'ನೀರಜ್ ಪಟೇಲ್ ಎಂದರೆ ನೀವೇನ? ನಮಗೆ ನಿಮ್ಮ ಮೇಲೊಂದು ದೂರು ಬಂದಿದೆ!'– ಅಪ್ಪ ಸಂಪೂರ್ಣ ವಾಗಿ ಅಧೀರನಾದ! ಅವನ ಬಾಯಿಯಿಂದ ಮಾತುಗಳೇ ಹೊರಡದಾದವು. ಪೊಲೀಸನೆ ಮುಂದುವರೆಯುತ್ತಾ, ನೀವು ನಿಮ್ಮ ಹೆಂಡತಿಗೆ ದೈಹಿಕವಾಗಿ ಹಿಂಸಿಸುತ್ತೀರೆಂದು ಆಕೆ ನಮಗೆ ದೂರು ಕೊಟ್ಟಿದ್ದಾಳೆ. ಆಗ ಅಪ್ಪ ಚೇತರಿಸಿ ಕೊಂಡು, 'ಅದೆಲ್ಲಾ ಸುಳ್ಳು! ನಾನೆಂದೂ ನನ್ನ ಹೆಂಡತಿಗೆ ಹೊಡೆದಿಲ್ಲ' ಎಂದು ಇದ್ದ ಬದ್ದ ಧೈರ್ಯವನ್ನೆಲ್ಲಾ ಒಟ್ಟುಗೂಡಿಸಿ ಹೇಳಿದ. ಅಲ್ಲೇ ಇದ್ದ ನನಗೆ ಏನು ನಡೆಯುತ್ತಿದೆ ಎಂದು ಅರ್ಥವಾಗಲು ಕೆಲವಾರು ನಿಮಿಷಗಳೇ ಬೇಕಾದವು. ಅಂತೂ ಅಪ್ಪನ ವಿಚಾರಣೆಯ ನಂತರ ಪೊಲೀಸ್ ನನ್ನನ್ನು ಕೇಳಿದ: 'ನಿಮ್ಮ ಅಪ್ಪ, ನಿಮ್ಮ ಅಮ್ಮನಿಗೆ ಯಾವತ್ತಾದರೂ ಹೊಡೆದಿದ್ದಾರಾ?' ನಾನು ಇಲ್ಲವೆಂದು ತಲೆ ಅಲ್ಲಾಡಿಸಿದೆ. ಅಷ್ಟು ಹೊತ್ತಿಗೆ ಇದೇನು ಗಲಾಟೆ ನಡೆಯುತ್ತಿದೆ ಎಂಬುದನ್ನು ನೋಡಲು, ರೇಷ್ಮಳೂ ಅಲ್ಲಿಗೆ ಬಂದಿದ್ದಳು. ಪೊಲೀಸ್ ರೇಷ್ಮಳಿಗೂ ಅದೇ ಪ್ರಶ್ನೆಯನ್ನು ಕೇಳಿದ. ಅವಳು ಸಹ ಅದಕ್ಕೆ ನಕಾರಾತ್ಮಕವಾಗಿ ಉತ್ತರಿಸಿದಳು. ಕೊನೆಗೆ ಪೊಲೀಸ್ ಅಮ್ಮನಿಗೆ ಎಚ್ಚರಿಕೆ ಕೊಟ್ಟು ಸುಮ್ಮನೆ ಹೊರಟುಹೋದರು.

ಅಮ್ಮ ಮತ್ತು ಅಪ್ಪನ ಜಗಳ ಅವ್ಯಾಹತವಾಗಿ ಮುಂದುವರೆದಿತ್ತು; ಅಮ್ಮ ವಿನಾಕಾರಣ ಅಪ್ಪನೊಡನೆ ಕಾಲು ಕೆರೆದುಕೊಂಡು ಜಗಳ ಶುರು ಮಾಡುತ್ತಿದ್ದಳು. ತಾತ ಮತ್ತು ಅಜ್ಜಿಯನ್ನು ತನ್ನ ಮನೆಯಿಂದ ಹೊರಗೋಡಿಸುವುದರಲ್ಲಿ ಯಶಸ್ವಿಯಾದ ಅವಳು ಅಷ್ಟಕ್ಕೇ ತೃಪ್ತಳಾದಂತೆ ಕಾಣಲಿಲ್ಲ. ತಾನು ಪ್ರೀತಿಸಿ ಮದುವೆಯಾದವರನ್ನು ತೀವ್ರ ಸಂಕಷ್ಟಕ್ಕೆ ಗುರಿಪಡಿಸಿ, ಅದರಿಂದ ವಿಕೃತ ಸಂತೋಷವನ್ನು ಅನುಭವಿಸುವುದು ಅವಳ ಗುರಿಯಾಗಿತ್ತು ಎನ್ನುವುದು ಈಗ ನನಗೆ ಅರ್ಥವಾಗುತ್ತಿದೆ. ಗಂಡ ಹೆಂಡಿರ ಜಗಳದಲ್ಲಿ ಕೂಸು ಬಡವಾಯಿತು ಎಂಬ ಗಾದೆಯಂತೆ, ಮನೆಯ ಪ್ರಕ್ಷುಬ್ಧ ವಾತಾವರಣದಲ್ಲಿ ತೀವ್ರವಾಗಿ ನಲುಗಿದವರು ನಾನು ಮತ್ತು ರೇಷ್ಮ. ಅಭ್ಯಸಿಸಲು ಅಗತ್ಯವಾದ ಪ್ರಶಾಂತ ವಾತಾವರಣವೇ ಇಲ್ಲದಾಗ ಓದಿನಲ್ಲಿ ಏಕಾಗ್ರತೆ ಸಾಧಿಸುವುದು ಕಷ್ಟವಾಗಿ ನನ್ನ ಓದು ಕುಂಟುತ್ತಾ ಸಾಗಿತು. ಎ ಗ್ರೇಡು ಬರುತ್ತಿದ್ದ ನನಗೆ ಬಿ ಅಥವಾ ಸಿ ಗ್ರೇಡುಗಳು ಬರಲಾರಂಭಿಸಿದವು. ರೇಷ್ಮ ಮಾತ್ರ ಆ ಎಳೆ ವಯಸ್ಸಿನಲ್ಲಿ ವಿಷಣ್ಣತೆಯಿಂದ ಕುಗ್ಗಿಹೋದಳು. ಅಮ್ಮ ಮಾತ್ರ ಇವೆಲ್ಲದರ ಬಗ್ಗೆ ತಲೆಕೆಡಿಸಿಕೊಂಡಂತೆ ಕಾಣಲಿಲ್ಲ.

ಹೀಗೊಂದು ದಿನ, ಅಮ್ಮ ಪತ್ತೆ ಪೊಲೀಸಿನವರಿಗೆ ದೂರವಾಣಿ ಕರೆ ಮಾಡಿ, ಗಂಡ ತನಗೆ ಹೊಡೆದನೆಂದು ಮತ್ತೆ ದೂರನ್ನು ಕೊಟ್ಟಳು. ಮನೆಗೆ ಪೊಲೀಸಿನವರು ಬಂದು ಎಂದಿನಂತೆ ವಿಚಾರಣೆ ನಡೆಸಿದರು. ನಾನು, ಅಪ್ಪ ಮತ್ತು ರೇಷ್ಮ ಎಲ್ಲರೂ ಅಮ್ಮ ಅಪ್ಪನಿಗೆ ಹೊಡೆದಿಲ್ಲವೆಂದು ಹೇಳಿಕೆ ಕೊಟ್ಟೆವು. ಆಗ ಪೊಲೀಸಿನವರು ಅಮ್ಮನಿಗೆ ಹೀಗೆ ಆದೇಶ ನೀಡಿದರು: ನೋಡಿ ಮಿಸೆಸ್ ನೇಹ ಅವರೆ, ನೀವು ಹೀಗೆ ಸುಳ್ಳು ದೂರನ್ನು ಕೊಟ್ಟು ನಮ್ಮ ಸಮಯವನ್ನು ಪದೇ ಪದೇ ಹಾಳು ಮಾಡುತ್ತಿದ್ದೀರಿ! ಇನ್ನೊಂದು ಬಾರಿ ನೀವೇನಾದರೂ ಹೀಗೆಯೇ ಸುಳ್ಳುದೂರನ್ನು ಕೊಟ್ಟರೆ, ಆಗ ನಾವು ನಿಮ್ಮನ್ನು ಬಂಧಿಸಬೇಕಾದೀತು, ಎಚ್ಚರಿಕೆ! ಎಂದು ಹೇಳಿ ಹೊರಟುಹೋದರು.

ಕೊನೆಗೊಂದು ದಿನ ಅಮ್ಮ ಅಪ್ಪನನ್ನು ಮನೆಯಿಂದ ಅಟ್ಟುವುದಕ್ಕೆ ಒಂದು ಭರ್ಜರಿ ಉಪಾಯವನ್ನು ಮಾಡಿದಳು: ನಾನು ಮತ್ತು ನನ್ನ ತಂಗಿ ಮನೆಯಲ್ಲಿಲ್ಲದ ಸಮಯವನ್ನು ನೋಡಿಕೊಂಡು, ಮೊದಲಿನಂತೆಯೇ ಪೊಲೀಸರಿಗೆ ತನ್ನ ಗಂಡ ತನಗೆ ದೈಹಿಕವಾಗಿ ಹಿಂಸಿಸುತ್ತಿದ್ದಾನೆಂದು ದೂರು ಕೊಟ್ಟಳು. ಪೊಲೀಸರು ಆ ಕೂಡಲೇ ಮನೆಗೆ ಬಂದರು. ಅಪ್ಪನನ್ನು ವಿಚಾರಣೆ ಮಾಡಿದರು. ಅಪ್ಪ ಇಲ್ಲವೆಂದು ಹೇಳಿಕೆ ಕೊಟ್ಟನಂತೆ. ಕೊನೆಗೆ ಅದು ಅವಳ ಮತ್ತು ಅವನ ಮಾತಿನ ಮಧ್ಯದ ಭಿನ್ನಾಭಿಪ್ರಾಯವಾದ್ದರಿಂದ, ಪೊಲೀಸಿನವರು ಬೇರೆ ದಾರಿ ಇಲ್ಲದೆ ಅವಳ ಮಾತನ್ನು ನಂಬಿ, ಅಪ್ಪನನ್ನು ಬಂಧಿಸಿ ಕರೆದುಕೊಂಡು ಹೋದರು!

ನಂತರ ಆದ ಬೆಳವಣಿಗೆಗಳಲ್ಲಿ, ಅಪ್ಪ ಅಮ್ಮ ಬೇರೆ ಬೇರೆಯೇ ಜೀವಿಸತೊಡಗಿದರು. ಅಪ್ಪ ತನ್ನ ಅಮ್ಮನನ್ನು ತನ್ನ ಬಳಿಯೇ ಇಟ್ಟುಕೊಂಡು ಅವರನ್ನು ನೋಡಿಕೊಳ್ಳತೊಡಗಿದರು. ಕೊನೆಗೊಂದು ದಿನ ಅಪ್ಪ ಅಮ್ಮರ ವಿವಾಹ ವಿಚ್ಛೇದನವಾಯಿತು! ಅಮ್ಮ ಅಪ್ಪನನ್ನು ಮನೆಯಿಂದ ಹೊರಗಟ್ಟಿದ್ದಲ್ಲದೆ, ಅವನಿಂದ ಅಗಾಧ ಮೊತ್ತದ ಹಣವನ್ನೂ ಪಡೆಯಲಿಕ್ಕೆ ಸಾಧ್ಯವಾಯಿತು.

ಗಂಡನನ್ನು ಓಡಿಸಿದ ಮೇಲೆಯೂ, ನೇಹಳ ಮನಸ್ಸು ತಣ್ಣಗಾಗಲಿಲ್ಲ. ನಾನು ಅಪ್ಪನಂತೆಯೇ ಕಾಣುತ್ತಿದ್ದರಿಂದ, ವಿನಾಕಾರಣ ನನ್ನ ಮೇಲೆಯೂ ಅಮ್ಮ ಕಿರುಚಾಡ ಹತ್ತಿದಳು. ಗಂಡನ ಮೇಲಿನ ಅಳಿದುಳಿದ ಕೋಪವನ್ನೆಲ್ಲಾ ನನ್ನ ಮೇಲೆ ಕಾರತೊಡಗಿದಳು. ಅಷ್ಟೇ ಅಲ್ಲ, ನನ್ನನ್ನು ಹಾಗೂ ರೇಷ್ಮಳನ್ನೂ ಅಪ್ಪನನ್ನು ಭೇಟಿ ಮಾಡಲು ಬಿಡುತ್ತಲೇ ಇರಲಿಲ್ಲ! ಅಮ್ಮನ ಪಾಶವೀ ಪ್ರವೃತ್ತಿ ಅಲ್ಲಿಗೇ ನಿಲ್ಲಲಿಲ್ಲ! ಯಾರೋ ಒಬ್ಬನನ್ನು ಡೇಟ್ ಮಾಡತೊಡಗಿದಳು. ಅವನನ್ನು ಮನೆಗೆ ಕರೆದುಕೊಂಡು ಬರುವುದೇನು, ಆತನೊಡನೆ ರಾತ್ರಿಗಳನ್ನು ಕಳೆಯುವುದೇನು ನನಗೆ ಜೀವನದ ಬಗ್ಗೆ ಅಸಹ್ಯ ಮೂಡತೊಡಗಿತು. ಇದರ ಬಗ್ಗೆ ಯಾರೊಬ್ಬರ ಜೊತೆಯೂ ಹೇಳಿಕೊಳ್ಳುವ ಹಾಗಿಲ್ಲ. ನನ್ನ ಜೀವನ ಉಸಿರು ಕಟ್ಟುವಂತಾಯಿತು! ಅಮ್ಮ ನನ್ನನ್ನು ಮತ್ತು ನನ್ನ ತಂಗಿಯನ್ನು ಒಂದಿನಿತೂ ಪಾಲಿಸಲಿಲ್ಲ. ನಮಗೆ ಕಾಲಕಾಲಕ್ಕೆ ಹೊಟ್ಟೆಗೆ ಹಾಕುವುದು, ಶಾಲೆಗೆ ಕರೆದುಕೊಂಡು ಹೋಗಿ ಬಿಡುವುದು, ನಂತರ ವಾಪಸ್ ಕರೆದುಕೊಂಡು ಬರುವುದು, ಲಾಲನೆ, ಪಾಲನೆ ಯಾವುದೂ ಇಲ್ಲ! ನಾನಂತೂ ಶಾಲೆಗೆ ನಡೆದುಕೊಂಡೇ ಹೋಗುತ್ತಿದ್ದೆ; ಶಾಲೆಗೆ ಹೋಗಲು 30 ನಿಮಿಷ ಹಿಡಿಯುತ್ತಿತ್ತು. ಹೈಸ್ಕೂಲಿಗೆ ಬಂದ ಮೇಲೆ, ಬಸ್ಸಿನಲ್ಲಿ ಹೋಗಿ ಬರಬಹುದೆಂದುಕೊಂಡೆ. ಬಸ್ಸಿಲ್ಲದಿದ್ದರೆ ನನ್ನ ವಿದ್ಯಾಭ್ಯಾಸದ ಗತಿಯೇನು ಎಂದು ನೆನೆಸಿಕೊಂಡರೆ, ಈಗಲೂ ಭಯವಾಗುತ್ತದೆ. ಹೀಗೆ ನಾನು ಹಲವಾರು ವರ್ಷಗಳ ಕಾಲ ಅಮ್ಮನ ಕಪಿಮುಷ್ಟಿಯಲ್ಲಿ ಬದುಕಬೇಕಾಯಿತು.

ಒಮ್ಮೆ ನಾನು ಹೈಸ್ಕೂಲಿನಲ್ಲಿದ್ದಾಗ ಅಮ್ಮ ಭಾರತಕ್ಕೆ ಹೋಗಿದ್ದಳು. ಅವಳು ಹಾಗೆಯೇ, ಪ್ರತಿವರ್ಷ ಹೋಗುತ್ತಿರುತ್ತಾಳೆ. ಆಗ ಅಪ್ಪನಿಂದ ಫೋನ್ ಬಂತು.